## ಕಚೇರಿಯ ಸಮಯದಲ್ಲಿ!

ಲಲನ್ ಒಂದು ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಆಫೀಸಿನಲ್ಲಿ ಮಧ್ಯಾಹ್ನದ ಊಟಕ್ಕೆ ಅರ್ಧತಾಸಿನ ಬಿಡುವಿರುತ್ತಿತ್ತು. ಅನಂತರ 5–10 ನಿಮಿಷಗಳ ವಿಸ್ತರಣೆ ಇತ್ತು. ಆ ದಿನ ಲಲನ್ ಒಂದು ತಾಸು ತಡವಾಗಿ ಬಂದ. ಮೇಲಧಿಕಾರಿ, 'ಇಷ್ಟೇಕೆ ತಡ ಮಾಡಿದೆ?' ಎಂದು ಕೇಳಿದರು. 'ಹೇರ್ ಕಟಿಂಗಿಗೆ ಹೋಗಿದ್ದೆ ಸರ್' ಎಂದುತ್ತರಿಸಿದ. 'ಏನು? ಆಫೀಸ್ ಟೈಮಲ್ಲಿ ಹೇರ್ ಕಟಿಂಗಾ!' ಎಂದು ಉದ್ಗರಿಸಿದಾಗ, 'ಆಫೀಸಿನ ಟೈಮಲ್ಲಿ ಕೂದಲು ಬೆಳೆಯುವುದಿಲ್ಲವೆ ಸರ್? ಅದನ್ನು ಆಫೀಸಿನ ಟೈಮಲ್ಲೇ ಕಟಿಂಗ್ ಮಾಡಿಸಿಕೊಳ್ಳಬೇಕಲ್ಲವೆ?' ಎಂದ.

**ಆರ್.ವಿ. ಭಟ್ಟ**





## ಎಕ್ಸ್‌ಪೈರಿ ಡೇಟ್

ಪರಮೇಶಿ ಕೈಯಲ್ಲಿ ಯಾವುದೋ ಸರ್ಟಿಫಿಕೇಟ್ ಹಿಡಿದುಕೊಂಡು, ಅದನ್ನು ತಿರುಗಿಸಿ–ಮುರುಗಿಸಿ ಏನನ್ನೋ ಗಂಭೀರವಾಗಿ ಹುಡುಕುತ್ತಿದ್ದ. ಅವನ ಹೆಂಡತಿ ಪಾರ್ವತಿ ಕುತೂಹಲದಿಂದ ಕೇಳಿದಳು, 'ಏನ್ರಿ ಅದು? ಅಷ್ಟೊಂದು ಗಂಭೀರವಾಗಿ ನೋಡ್ತಿದ್ದೀರಲ್ಲಾ?' ಎಂದು. ಪರಮೇಶಿ ಹೇಳಿದ, 'ಏ... ನಮ್ ಮ್ಯಾರೇಜ್ ಸರ್ಟಿಫಿಕೇಟ್ ಕಣೇ, ಎಕ್ಸ್‌ಪೈರಿ ಡೇಟ್ ಏನಾದ್ರೂ ಇದೆಯಾ ಅಂತ ಹುಡುಕ್ತಾ ಇದ್ದೀನಿ. ದರಿದ್ರ ನನ್ಮಕ್ಳು ಹಾಕೇ ಇಲ್ಲಾ...' ಕೈಯಲ್ಲಿದ್ದ ಸರ್ಟಿಫಿಕೇಟನ್ನು ಪಕ್ಕಕ್ಕಿಡುತ್ತಾ ಹೇಳಿದ.

**ಪ.ನಾ. ಹಳ್ಳಿ ಹರೀಶ್ ಕುಮಾರ್**